Read India
An Imprint of Pratham Books



# ನನ್ನ ಬಾಲವಾಡಿ

ರುಕ್ಮಿಣಿ ಬ್ಯಾನರ್ಜಿ
ಮಾಧವ ಚವ್ಹಾಣ್



Original Story *(Hindi)* Hamaari Balwadi
by Rukmini Banerji
© Pratham Books 2004
Second Kannada Edition: 2009

Illustrations: Sheetal Thapa
Kannada Translation:

ISBN: 81-8263-111-4

Registered Office:
PRATHAM BOOKS
633-634, 4th 'C' Main, 6th 'B' Cross,
OMBR Layout, Banaswadi, Bangalore 560 043
✆ 080-25429726 / 27 / 28


Regional Offices:
Mumbai ✆ 022-65162526, New Delhi ✆ 011-65684113

Typesetting and Layout by: Trimiti Services

Printed by: Aegean Offset Printers, New Delhi.

Published by PRATHAM BOOKS
www.prathambooks.org

The development of this book was sponsored by
Dubai Creek Round Table, Dubai, U.A.E.



# ನನ್ನ ಬಾಲವಾಡಿ


ಪರಿಕಲ್ಪನೆ

**ರುಕ್ಮಿಣಿ ಬ್ಯಾನರ್ಜಿ**

ವಿವರಣೆ

**ಮಾಧವ ಚವ್ಹಾಣ್**

ಅನುವಾದ

**ಉಷ**

ಇದು ನನ್ನ ಶಾಲೆ, ಇದಕ್ಕೆ ಬಾಲವಾಡಿ ಎನ್ನುತ್ತಾರೆ.


बाल वाडी


ನನ್ನ ಸೋದರ ಚಿನ್ನು ಮತ್ತು ನಾನು ಬಾಲವಾಡಿಗೆ ಹೋಗುತ್ತೇವೆ.
ಇದೊಂದು ಪುಟ್ಟ ಶಾಲೆ,
ನನ್ನಂತಹ ಅನೇಕ ಪುಟಾಣಿ ಮಕ್ಕಳು ಇಲ್ಲಿದ್ದಾರೆ.




ಬಾಗಿಲ ಬಳಿಯೇ ಚಪ್ಪಲಿಗಳನ್ನು ಬಿಟ್ಟು ಒಳ ಹೋಗುತ್ತೇವೆ.
ಎಲ್ಲರೂ ಚಪ್ಪಲಿಗಳನ್ನು ಸಾಲಾಗಿ ಇಟ್ಟಿರುತ್ತಾರೆ.
ಸಾಲಿನಲ್ಲಿ ಇಟ್ಟರೆ ನೋಡಲು ಚಂದವೆನಿಸುತ್ತದೆ.



ಗೋಡೆಯ ಬಳಿ ಊಟದ ಬುತ್ತಿಗಳನ್ನು ಇಡುತ್ತೇವೆ.
ಕೆಲವು ದೊಡ್ಡ ಬುತ್ತಿಗಳಾದರೆ, ಇತರ ಹಲವು ಚಿಕ್ಕವು.
ಗೋಡೆಯಲ್ಲಿರುವ ಮೊಳೆಗಳಲ್ಲಿ ನೀರಿನ
ಬಾಟಲಿಗಳನ್ನು ತೂಗಿಡುತ್ತೇವೆ.
ಒಂದೊಂದು ಬಾಟಲಿಗೂ ಒಂದೊಂದು ಬಣ್ಣ.
ಕೆಂಪು, ನೀಲ, ಹಸಿರು, ಹಳದಿ...



ಲೆಕ್ಕ ಮಾಡುವುದೆಂದರೆ ನನಗೆ ಇಷ್ಟ
ವಿವಿಧ ಆಕೃತಿಗಳನ್ನು ಜೋಡಿಸುವುದೇ ಚಿನ್ನುವಿಗೆ ಇಷ್ಟ
ಮಣಿಗಳೊಂದಿಗೆ ಆಟವಾಡಲು ಆತ ಬಯಸುತ್ತಾನೆ.
ನನಗೆ ಚುಕ್ಕಿ ಕಾರ್ಡ್‌ಗಳು ಸಿಕ್ಕಿದರೆ ಹೊತ್ತು ಗೊತ್ತಾಗದು.
ಇವೆಲ್ಲಾ ಆಟಿಕೆಗಳಿಂದ ಬುದ್ಧಿ ಬೆಳೆಯುತ್ತದೆ ಎನ್ನುತ್ತಾರೆ
ನಮ್ಮ ಟೀಚರ್.



ನಾವು ಪುಸ್ತಕಗಳನ್ನು ಓದುತ್ತೇವೆ.

ಕೆಲವು ಪುಸ್ತಕಗಳಲ್ಲಿ ಚಿತ್ರಗಳಿರುತ್ತವೆ.

ಅಕ್ಷರ ಗುರುತಿಸಲು ಟೀಚರ್ ನಮಗೆ ಹೇಳಿ ಕೊಡುತ್ತಾರೆ.

ನನಗೆ ಅಕ್ಷರಮಾಲೆಯೇ ಗೊತ್ತಿರುವುದರಿಂದ
ನಾನು ಬೇಗನೆ ಕಲಿಯುತ್ತೇನೆ ಎಂದು ಟೀಚರ್ ಹೇಳುತ್ತಾರೆ.

ನನಗೆ ವಾಕ್ಯ ಓದಲು ಕೂಡಾ ಬರುತ್ತದೆ ಎಂದು ಟೀಚರ್‌ಗೆ
ಇನ್ನೂ ಗೊತ್ತಿಲ್ಲ.



अ
आ

ಇದು ಕಥೆ ಕೇಳುವ ಸಮಯ.

ಟೀಚರ್ ಕೈಯಲ್ಲಿ ಗೊಂಬೆಗಳಿವೆ.

ನಮಗೆ ಕಥೆ ಹೇಳಲು ಅವರು ಗೊಂಬೆಗಳನ್ನು ಬಳಸುತ್ತಾರೆ.

ಗೊಂಬೆಗಳ ಧ್ವನಿಯಂತೂ ವಿಚಿತ್ರ.


बाल वाडी



ಗೊಂಬೆಗಳೇ ಮಾತನಾಡುತ್ತವೆ ಎಂದು ನನ್ನ ಗೆಳೆಯರ ಭಾವನೆ,
ಅವರಿಗೆ ಆದರಿಂದ ಆಶ್ಚರ್ಯ, ನನಗಂತೂ ಅಲ್ಲ.
ಯಾಕೆಂದರೆ, ಗೊಂಬೆಗಳಿಗೆ ಬಾಯಿ ಬರುವುದಿಲ್ಲ.
ವಿಚಿತ್ರ ಧ್ವನಿಯಿಂದ ಗೊಂಬೆಗಳಂತೆ ಮಾತನಾಡುವವರು
ನಮ್ಮ ಟೀಚರ್.



ಈಗ ಆಟ ಆಡುವ ಸಮಯ.

ಆವೇಮಣ್ಣು ತುಂಬಿರುವ ತಪ್ಪಲೆ ಒಂದು ನಮ್ಮ ಶಾಲೆಯಲ್ಲಿದೆ.

ಆವೇಮಣ್ಣಿನಲ್ಲಿ ಗೊಂಬೆ ಮಾಡುವುದೆಂದರೆ ಚಿನ್ನುವಿಗೆ ಇಷ್ಟ.

ನನಗಂತೂ ಹಣ್ಣುಗಳು ಮತ್ತಿತರ ವಸ್ತುಗಳನ್ನು ಮಾಡಲು ಇಷ್ಟ.


अ
आ

ಸಂಜೆ ನಾಲ್ಕರ ವೇಳೆಗೆ ಗಂಟೆ ಹೊಡೆಯುತ್ತದೆ.

ನಮ್ಮನ್ನು ಮನೆಗೆ ಕರೆದೊಯ್ಯಲು ಅಮ್ಮ ಬರುತ್ತಾರೆ.

ಓಡಿ ನಾನು ಅವರನ್ನು ತಬ್ಬಿ ಕೊಳ್ಳುತ್ತೇನೆ.

ಚಿನ್ನುವಿಗೆ ಇಷ್ಟವಾಗುವುದಿಲ್ಲ.

ಆತ ದೂರು ಹೇಳುತ್ತಾನೆ.

ನನಗಂತೂ ಶಾಲೆಯೆಂದರೆ ಮಜಾ.

ಆದರೆ, ಮನೆಗೆ ಹೋಗುವುದು ಭಾರೀ ಮಜಾ.



ಮಗುವಿಗೆ ತನ್ನ ಅನುಭವಗಳನ್ನು ಹಂಚಿಕೊಳ್ಳಲು ಭಲೇ ಉತ್ಸಾಹ. ತಾನೇನು ಮಾಡಿದೆ. ಎಲ್ಲೆಲ್ಲಿಗೆ ಹೋದೆ ಎಂಬಿತ್ಯಾದಿ ವಿಚಾರ ಇತರರಿಗೆ ಹೇಳಲೇ ಬೇಕಲ್ಲ. ನನ್ನ ಬಾಲವಾಡಿ ಅನುಭವ ಎಂಬುದು ಮಕ್ಕಳ ಭಾಷೆಯಲ್ಲಿ ಎಷ್ಟು ಕುಶಿ ಕೊಡುತ್ತದೆಂದು ತೋರಿಸುತ್ತದೆ.

**ಈ ಮಾಲಿಕೆಯ ಇನ್ನೊಂದು ಪುಸ್ತಕ**

- **ಕಾಡಿನಲ್ಲಿ ಒಂದು ಶಾಲೆ**
- **ಗಾಳಿಯ ಪ್ರಭಾವ**

ಮೈನವಿರೇಳಿಸುವ ಇನ್ನು ಅನೇಕಾನೇಕ ಭಾರತೀಯ ಭಾಷಾ ಪುಸ್ತಕಗಳ ಮಾಹಿತಿಗಾಗಿ ಸಂಪರ್ಕಿಸಿ : www.prathambooks.org

ನಮ್ಮ ಪುಸ್ತಕಗಳು ಕನ್ನಡ, ಇಂಗ್ಲೀಷ್, ಹಿಂದಿ, ತೆಲಗು, ತಮಿಳು, ಮರಾಠಿ, ಗುಜರಾತಿ, ಬೆಂಗಾಲಿ, ಪಂಜಾಬಿ, ಉರ್ದು ಮತ್ತು ಒರಿಯಾ ಭಾಷೆಗಳಲ್ಲೂ ಲಭ್ಯ ಇವೆ.

PRATHAM BOOKS

ಅತ್ಯುತ್ತಮ ಗುಣಮಟ್ಟದ ಪುಸ್ತಕಗಳನ್ನು ಭಾರತೀಯ ಭಾಷೆಗಳಲ್ಲಿ, ಮಕ್ಕಳಿಗೆ ಎಟುಕುವ ಬೆಲೆಯಲ್ಲಿ ನೀಡುವ ಲಾಭರಹಿತ ಪ್ರಕಾಶನ ಸಂಸ್ಥೆ 'ಪ್ರಥಮ್ ಬುಕ್ಸ್'

ISBN 81-8263-111-4

9788182631113

Age Group: 3-6 years
Nanna Balawadi (Kannada)
MRP Rs. 15.00